**ರಾಜಿ ಅರ್ಜಿಯ ಮೇರೆಗೆ ಆದೇಶ**

ಪ್ರತಿವಾದಿಯು ವಾದಿಗೆ ದಿನಾಂಕ: 05.03.2024 ರಂದು ದಾವಾ ಷೆಡ್ಯೂಲ್ ಸ್ವತ್ತನ್ನು ನಗದು ಗೌರ್ನಮೆಂಟ್ ರೂ.3,75,000/- (ಮೂರು ಲಕ್ಷದ ಎಪ್ಪತ್ತೈದು ಸಾವಿರ) ರೂಪಾಯಿಗಳಿಗೆ ಶುದ್ಧ ಕ್ರಯಕ್ಕೆ ಕೊಡಲು ಒಪ್ಪಿಕೊಂಡು, ಕ್ರಯದ ಮೊಬಲಗು ಪೈಕಿ ರೂ.3,15,000/- (ಮುರು ಲಕ್ಷದ ಹದಿನೈದು ಸಾವಿರ) ರೂಪಾಯಿಗಳನ್ನು ಮುಂಗಡವಾಗಿ ದಿನಾಂಕ: 05.03.2024 ರಂದೇ ಸಾಕ್ಷಿಗಳ ಸಮಕ್ಷಮ ವಾದಿಯಿಂದ ಪ್ರತಿವಾದಿಯು ನಗದಾಗಿ ರೂಪಾಯಿಗಳನ್ನು ಎಸ್.ಬಿ.ಐ. ಬ್ಯಾಂಕ್ ಕೆ.ಆರ್.ಪೇಟೆ ಶಾಖೆಯ ಚೆಕ್ ನಂ.410859, ದಿನಾಂಕ: 05.03.2024 ರ ಮೂಲಕ ಒಟ್ಟಾರೆಯಾಗಿ ರೂ.3,65,000/- (ಮೂರು ಲಕ್ಷದ ಅರವತ್ತೈದು ಸಾವಿರ) ರೂಪಾಯಿಗಳು ಪಡೆದುಕೊಂಡಿರವುದನ್ನು ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ. ಮತ್ತು ದಾವಾ ಷೆಡ್ಯೂಲ್ ಸ್ವತ್ತನ್ನು ಬೇರೆ ಯಾರಿಗೂ ಪರಭಾರೆ ಮಾಡಿರುವುದಿಲ್ಲ. ಎಂದು ಹಾಗೂ ಯಾವುಧೇ ಹಣಕಾಸು ಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ ಸಾಲ ವಗೈರೆ ಮಾಡಿರುವುದಿಲ್ಲ ಎಂದು ಹಾಗೂ ಯಾವುದೇ ಆಧಾರ, ಭೋಗ್ಯ ವಗೈರೆ ಮಾಡಿರುವುದಿಲ್ಲ. ಎಂದು ಒಪ್ಪಿಕೊಂಡಿರುತ್ತಾರೆ. ಮತ್ತು ಕ್ರಯದ ಬಾಬ್ತು ಉಳಿಕೆ ಹಣವಾದ ರೂ.10,000/- (ಹತ್ತು ಸಾವಿರ) ರೂಪಾಯಿಗಳನ್ನು ಈಗಾಗಲೇ ವಾದಿಯಿಂದ ಪ್ರತಿವಾದಿಯು ಪಡೆದುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತನ್ನು ವಾದಿಗೆ ಪ್ರತಿವಾದಿಯು ದಿನಾಂಕ: 05.03.2024 ರಂದು "ಸ್ವಾಧೀನ ರಹಿತ" ಖುಷ್ಕಿ ಜಮೀನಿನ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಹಾಗೂ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನೋಂದಣಿ ಸಮಯಕ್ಕೆ ಅವಶ್ಯಕವಾಗಿ ಬೇಕಾದ ಎಲ್ಲಾ ದಾಖಲಾತಿಗಳನ್ನು ಒಂದು

ತಿಂಗಳ ಒಳಗಾಗಿ ಸಿದ್ದಪಡಿಸಿಕೊಂಡು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ವಾದಿಗೆ ಕ್ರಮವಾದ ಶುದ್ಧ ಕ್ರಯಪತ್ರವನ್ನು ಬರೆಯಿಸಿ ನೋಂದಣಿ ಮಾಡಿಸಿಕೊಡುವುದಾಗಿ ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ. ಈ ರಾಜಿ ಅರ್ಜಿಯಂತೆ ಪ್ರತಿವಾದಿಯು ವಾದಿಗೆ ಕ್ರಯಪತ್ರವನ್ನು ಬರೆದುಕೊಡದಿದ್ದರೆ, ವಾದಿ ಕಾನೂನಿನ ಪ್ರಕಾರ ಪ್ರತಿವಾದಿಯ ವಿರುದ್ಧ ಮಾನ್ಯ ಘನ ನ್ಯಾಯಾಲಯದ ಮೂಲಕ ಕ್ರಯ ಪತ್ರವನ್ನು ಬರೆಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಪ್ರತಿವಾದಿಗೆ ಇರತಕ್ಕ ಹಾಗೂ ಇರಬಹುದಾದ ಪ್ರತಿವಾದಿಯ ಸರ್ವ ವಿಶಿಷ್ಟ ಹಕ್ಕು ಭಾಧ್ಯತೆಗಳನ್ನು ಈ ದಿವಸವೇ ತ್ಯಜಿಸಿ ಷೆಡ್ಯೂಲ್ ಸ್ವತ್ತನ್ನು ವಾದಿಯ ಸುಪರ್ದಿಗೆ ಬಿಟ್ಟುಕೊಟ್ಟಿರುತ್ತಾರೆ. ಇಲ್ಲಿಂದ ಮುಂದೆ ಷೆಡ್ಯೂಲ್ ಸ್ವತ್ತಿಗೆ ವಾದಿಯೇ ಸಂಪೂರ್ಣ ಮಾಲೀಕರಾಗಿ/ಹಕ್ಕುದಾರರಾಗಿ ಸಂಬಂಧಪಟ್ಟ ಕಂದಾಯ ಇಲಾಖೆಯಲ್ಲಿ ಷೆಡ್ಯೂಲ್ ಸ್ವತ್ತಿನ ಕಂದಾಯ, ಖಾತೆ, ಪಹಣಿ ಹಾಗೂ ಇತರೆ ದಾಖಲಾತಿಗಳನ್ನು ವಾದಿಯ ಹೆಸರಿಗೆ ವರ್ಗಾಹಿಸಿಕೊಂಡು, ಕಂದಾಯವನ್ನು ಕಾಲ-ಕಾಲಕ್ಕೆ ಸರಿಯಾಗಿ ವಾದಿಯೇ ಪಾವತಿಮಾಡಿಕೊಂಡು ಹೋಗುವುದು. ಮತ್ತು ದಾವ ಷೆಡ್ಯೂಲ್ ಸ್ವತ್ತಿನಲ್ಲಿ ದೊರಕಬಹುದಾದ ನಿಧಿ, ನಿಕ್ಷೇಪ, ಜಲತರು, ಪಾಷಾಣಾಧಿ, ಅಷ್ಟಭೋಗ ತೇಜ ಸೌಮ್ಯಗಳಿಗೂ ಮತ್ತು ಅವುಗಳ ಆಧಿ, ಕ್ರಯ ದಾನ ಆಧಾರ, ಭೋಗ್ಯ (ಪರಭಾರೆ ಪರದೀನ) ಮತ್ತು ಮುಂದಾದ ಪರಿವರ್ತನೆಗಳೆಂಬ ಎಲ್ಲಾ ವ್ಯವಹಾರ ಚತುಷ್ಟಂಗಳಿಗೂ ಸಹಾ ವಾದಿಯೇ ಸಂಪೂರ್ಣ ಹಕ್ಕುದಾರರಾಗಿ ವಾದಿಯ ಇಚ್ಚಾನುಸಾರ ಸುಖದಿಂದ ಷೆಡ್ಯೂಲ್ ಸ್ವತ್ತನ್ನು ಅನುಭವಿಸಿಕೊಂಡು ಹೋಗತಕ್ಕದ್ದು, ಎಂದು ಪ್ರತಿವಾದಿಯು ಈ ರಾಜಿ ಅರ್ಜಿಯ ಮೂಲಕ ಮುಕ್ತ ಸಮ್ಮತಿಯಿಂದ ಒಪ್ಪಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯು ಈ ದಿವಸ ವಾದಿಗೆ ಈ ರಾಜಿ ಪತ್ರದ ಮೂಲಕ ಕೊಟ್ಟಿರುವುದೇ ವಿನಃ

ಬೇರೆ ಯಾರಿಗೂ ಯಾವುದೇ ಕ್ರಯ, ದಾನ, ಆಧಾರ, ಭೋಗ್ಯ, ವ್ಯವಸ್ಥೆ ಪತ್ರ, ಜಿ.ಪಿ.ಎ.. ಕ್ರಯದ ಕರಾರು, ಹಕ್ಕು ಬಿಡುಗಡೆ ಪತ್ರ. ಮರಣ ಶಾಸನ ಪತ್ರ ಯಾವುದೇ ಬ್ಯಾಂಕ್/ಸೋಸೈಟಿ, ಹಣಕಾಸು ಸಂಸ್ಥೆ, ಖಾಸಗಿ ವ್ಯಕ್ತಿಗಳ ಸಾಲ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ಸ್ತ್ರೀಧನದ ಹಕ್ಕು. ಸಿವಿಲ್, ರೆವೆನ್ಯೂ, ಕ್ರಿಮಿನಲ್ ಹಾಗೂ ಯಾವುದೇ ಕೋರ್ಟ್ ಅವಾಚ್‌ಮೆಂಟ್ ಮತ್ತು ಡಿಕ್ರಿ, ಜಪ್ತಿ, ಜಮೀನು ಹಾಗೂ ಇತ್ಯಾದಿ ಯಾವುದೇ ಹಕ್ಕು ಭಾಧ್ಯತೆಗಳಿಗೆ ಒಳಪಡಿಸುವುದಿಲ್ಲ ಎಂದು ಮುಕ್ತ ಸಮ್ಮತಿಯಿಂದ ಪ್ರತಿವಾದಿಯು ಒಪ್ಪಿ ಈ ರಾಜಿ ಪತ್ರಕ್ಕೆ ಸಹಿ ಮಾಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಯು ಈ ರಾಜಿ ಪತ್ರದ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡು ರಾಜಿ ಅರ್ಜಿ ಮಾಡಿಕೊಂಡು, ಓದಿ-ಓದಿಸಿ ತಿಳಿದುಕೊಂಡು ಮುಕ್ತ ಸಮ್ಮತಿಯಿಂದ ಪರಸ್ಪರ ಒಬ್ಬರಿಗೊಬ್ಬರು ಒಪ್ಪಿ ಯಾರ ಒತ್ತಡವಿಲ್ಲದೆ ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ. ಇನ್ನು ಮುಂದೆ ಈ ರಾಜಿ ಅರ್ಜಿಯ ಷೆಡ್ಯೂಲ್ ಸ್ವತ್ತಿನ ಮೇಲೆ ಇಲ್ಲಂದ ಮುಂದೆ ಪ್ರತಿವಾದಿಗಾಗಲೀ ಅಥವಾ ಪ್ರತಿವಾದಿಯ ವಾರಸುದಾರರುಗಳಿಗಾಗಲೀ ಅಥವಾ ಪ್ರತಿವಾದಿಯ ಪರ ಮತ್ಯಾರಿಗೂ ಯಾವ ವಿಧದಲ್ಲೂ ಹಕ್ಕು ಭಾಧ್ಯತೆಗಳಾವುವೂ ಸಹ ಇರುವುದಿಲ್ಲ ಎಂದು ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ.

ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಈ ದಿವಸ ಈ ಅರ್ಜಿ ಮೂಲಕ ಬಿಟ್ಟುಕೊಟ್ಟಿದ್ದು, ವಾದಿಯು ಇಂದಿನಿಂದ ದಾವಾ ಸ್ವತ್ತನ್ನು ಸ್ವಾಧೀನಪಡೆದುಕೊಂಡಿದ್ದು, ಮತ್ತು ದಾವಾ ಸ್ವತ್ತನ್ನು ವಾದಿಯು ತನ್ನ ಇಚ್ಛಾನುಸಾರ ವಂಶ ಪಾರಂಪರವಾಗಿ ಅನುಭವಿಸಿಕೊಂಡು ಹೋಗಲು ಹಕ್ಕುಳ್ಳವರಾಗಿರುತ್ತಾರೆ. ಮತ್ತು ದಾವಾ ಸ್ವತ್ತನ್ನು ವಾದಿಯು ತನ್ನ ಇಚ್ಛಾನುಸಾರ ಅಭಿವೃದ್ಧಿ ಪಡಿಸಿಕೊಂಡು ಹೋಗಲು ತನ್ನ ಆತ್ಮ ಸಂತೋಷದಿಂದಲೂ, ಸ್ವ ಇಚ್ಛೆಯಿಂದಲೂ ಒಪ್ಪಿಕೊಂಡು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಹೇಳಿ ಈ

ರಾಜಿ ಅರ್ಜಿ ಮೂಲಕ ಪ್ರತಿವಾದಿಯು ಒಪ್ಪಿರುತ್ತಾರೆ.

-: ಷೆಡ್ಯೂಲ್ ಸ್ವತ್ತಿನ ವಿವರ :-

ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕೃಷ್ಣರಾಜಪೇಟೆ ಗ್ರಾಮದ ಜಮಾಬಂಧಿಗೆ ಸೇರಿದ ಸರ್ವೆ ನಂ.247/9 ಎ1 ರಲ್ಲಿ ಪೂರ್ತಾ ವಿಸ್ತೀರ್ಣ 0-00.12 ಗುಂಟೆ (ಮುಕ್ಕಾಲು ಗುಂಟೆ) ಖುಷಿ ಜಮೀನಿಗೆ ಚೆಕ್ಕುಬಂದಿ:-

ಪೂರ್ವಕ್ಕೆ:-ಕೆ.ವೆಂಕಟಶೆಟ್ಟಿ ಬಿನ್ ವೆಂಕಟರಮಣಶೆಟ್ಟಿರವರ ಸ್ವತ್ತು,

ಪಶ್ಚಿಮಕ್ಕೆ:-ಚಿಕ್ಕಣ್ಣಶೆಟ್ಟಿ ಬಿನ್ ವೆಂಕಟರಮಣಶೆಟ್ಟಿ ರವರ ಸ್ವತ್ತು,

ಉತ್ತರಕ್ಕೆ:-ಹಳೆ ಕಿಕ್ಕೇರಿ ರಸ್ತೆ,

ದಕ್ಷಿಣಕ್ಕೆ:-ಚಂದ್ರಶೆಟ್ಟಿರವರ ಸ್ವತ್ತು.

ವಾದಿ ಮತ್ತು ಪ್ರತಿವಾದಿಯ ಈ ರಾಜಿ ಅರ್ಜಿಯನ್ನೇ ಅಂತಿಮ ಡಿಕ್ರಿ ಎಂದು ಪರಿಗಣಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ.

**:: <u>ಆದೇಶ</u> ::**

ವಾದಿಯು ದಾಖಲು ಮಾಡಿರುವ ಈ ದಾವೆಯನ್ನು ರಾಜಿ ಅರ್ಜಿಯ ಮುಖೇನ ವಿಲೇವಾರಿ ಮಾಡಲಾಗಿದೆ. ರಾಜಿ ಅರ್ಜಿಯು ತೀರ್ಪಿನ ಒಂದು ಭಾಗವಾಗಿರುತ್ತದೆ. ಅದರಂತೆ ಡಿಕ್ರಿಯನ್ನು ಬರೆಯಿರಿ.

**(ಶ್ರೀಮತಿ.ಸುಷ್ಮಾ.ಸಿ.)**
1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಕೆ.ಆರ್.ಪೇಟೆ.

Counsel for plaintiff has filed memo for refund of Court Fee Perused the memo. Satisfied as to the cause shown in the memo. By placing reliance on The High Court of Judicatory at

Madras, represented by its Registrar General Vs. M.C.Subramaniam and others, in Civil Appeal No.3063-3064 of 2001 Plaintiff is entitled for entire Court Fee.

Office is hereby directed to refund the entire court fee paid by the plaintiff to plaintiff after profer identification of the parties.

I Addl. Civil Judge and JMFC.,
K.R.Pete